**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು**
**ಸಿ.ಸಿ.ನಂ.2133/2023.**
**ದಿನಾಂಕಃ14.02.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**

| | | |
|---|---|---|
| ಸಾಕ್ಷಿಯ ಹೆಸರು | ಪುಟ್ಟಪ್ಪ | ಚಾಸಾ-1, ಪ್ರಾಸ-1 |
| ತಂದೆಯ ಹೆಸರು | ಮಲ್ಲಪ್ಪ | |
| ವಯಸ್ಸು | 70 ವರ್ಷ | |
| ಉದ್ಯೋಗ | ಕೂಲಿ ಕೆಲಸ | |
| ವಾಸ | ಚಿಕ್ಕಬಾಸೂರು ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿತರು ನನ್ನ ಸಂಬಂಧಿಕರು, 1 ನೇ ಆರೋಪಿ ನನ್ನ ಅಣ್ಣ. ಸುಮಾರು 1 ವರ್ಷದ ಹಿಂದೆ ಚಿಕ್ಕಬಾಸೂರಿನ ನನ್ನ ಮನೆ ಬಳಿ ಸಂಜೆ 5 ಗಂಟೆಯಲ್ಲಿ ಆರೋಪಿತರು ಬಂದು ವಿನಾ ಕಾರಣ ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಾನು ಯಾಕೆ ಬೈಯುತ್ತಿರಾ ಎಂದು ಕೇಳಿದ್ದಕ್ಕೆ, 1 ನೇ ಆರೋಪಿ ನನಗೆ ಕೈ, ಕೋಲಿನಿಂದ ಹೊಡೆದಿರುತ್ತಾರೆ. ನಂತರ 2 ನೇ ಆರೋಪಿ ನನಗೂ ಮತ್ತು 1 ನೇ ಆರೋಪಿ ಇಬ್ಬರಿಗೂ ಬೈದು ಸಮಾಧಾನಪಡಿಸಿದ. 3 ನೇ ಆರೋಪಿ ನನಗೆ ಬೈದಿರುತ್ತಾರೆ. ನಂತರ ಆರೋಪಿತರು ಹೋಗಿರುತ್ತಾರೆ. ಗಲಾಟೆ ಸಮಯದಲ್ಲಿ ನನ್ನ ಮನೆಯಲ್ಲಿ ನಾನು ಮತ್ತು ಚಾಸಾ 4 ಮತ್ತು 3 ಜನ ಆರೋಪಿತರು ಇದ್ದೆವು ಬೇರೆ ಯಾರು ಇರಲಿಲ್ಲ. ಈ ಬಗ್ಗೆ ನಾನು ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ.

ಸಾಕ್ಷಿಯು ದೂರಿನಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಂತರ ಪೊಲೀಸರು ಗಲಾಟೆಯಾದ ಸ್ವಲ್ಪ ದಿನದ ನಂತರ ಮನೆ ಬಳಿ ಸಂಜೆ 3, 4 ಗಂಟೆಯಲ್ಲಿ ಬಂದು ನಾನು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು ಮಾಡಿರುತ್ತಾರೆ. ಆ ಸಮಯದಲ್ಲಿ ಚಾಸಾ 2 ರವರು ಇದ್ದರು. ಸಾಕ್ಷಿಯು ಮಹಜರಿನಲ್ಲಿನ

ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಆರೋಪಿ ನನಗೆ ಹೊಡೆದ ಕೋಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಕೋಲನ್ನು ನೋಡಿ ಗುರುತಿಸಿದ್ದು, ಅದನ್ನು ಮು ಮಾ 1 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

**<u>ಪಾಟೀಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ದಿಃ20.04.2023 ರಂದು ಸಂಜೆ 6 ಗಂಟೆ ಸಮಯದಲ್ಲಿ 1ನೇ ಆರೋಪಿ ಕುಡಿದುಬಂದು ಅವಾಚ್ಯ ಶಬ್ಧಗಳಿಂದ ಬೈದು ಕೋಲಿನಿಂದ ನನ್ನ ಅಣೆಗೆ, ಬೆನ್ನಿಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸರಿ. 2 ಮತ್ತು 3ನೇ ಆರೋಪಿತರು ಸಹಃ ಅವಾಚ್ಯ ವಾಗಿ ಬೈದು ಹೊಡೆದಿರುತ್ತಾರೆ ಎಂದರೆ ಸಾಕ್ಷಿಯು ಅವರು 2ನೇ ಆರೋಪಿ ನನಗೆ ಹೊಡೆದಿರುವುದಿಲ್ಲ ಬೈದು ಸಮಾಧಾನ ಪಡಿಸಿರುತ್ತಾರೆ. 1ನೇ ಆರೋಪಿಯು ನನಗೆ ಕೊಲೆಮಾಡುತ್ತೇನೆಂದು ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಗಾಯಗೊಂಡಿದ್ದ ನಾನು ಕಡೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿ. ಈ ಬಗ್ಗೆ ದಿಃ26.04.2023 ರಂದು ಪೊಲೀಸರಿಗೆ ದೂರು ನೀಡಿರುತ್ತೇನೆ ಎಂದರೆ ಸರಿ. ನಂತರ ಪೊಲೀಸರು ದಿಃ27.04.2023 ರಂದು ಸಂಜೆ 5 ಗಂಟೆಗೆ ಸ್ಥಳಕ್ಕೆ ಬಂದು ಚಾಸಾ 2, 3 ರವರ ಸಮಕ್ಷಮ 5.30 ತನಕ ಮಹಜರ್ ಮಾಡಿ ಕೋಲನ್ನು ವಶಪಡಿಸಿಕೊಂಡರು ಎಂದರೆ ಸರಿ.

<u>**ಪಾಟೀಸವಾಲುಃ ಆರೋಪಿ ಪರ ಶ್ರೀ ಎಂ ಜಿ ವಕೀಲರಿಂದ ಃ**</u>

ನಿಪಿ 1 ನ್ನು ಠಾಣೆಯಲ್ಲಿ ಬರೆದಿರುತ್ತಾರೆ. ಯಾರು ಬರವಣಿಗೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ 1 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ನಾವು ದೂರು ನೀಡಿರುತ್ತೇವೆ ಅಷ್ಟೆ. ಪೊಲೀಸರು 2 ದಿನಗಳ ನಂತರ ಮಹಜರಿಗೆ ಬಂದಿರುತ್ತಾರೆ. ಮಹಜರಿಗೆ ಬಂದಿದ್ದಾಗ 4 ಗಂಟೆ ಆಗಿದ್ದಿರಬಹುದು. ಇಬ್ಬರು ಪೊಲೀಸರು ಮಹಜರಿಗೆ ಬಂದಿದ್ದರು. ಮಹಜರ್ ಸಮಯದಲ್ಲಿ ನಮ್ಮ ಊರಿನ ಇಬ್ಬರು ಚೌಡಪ್ಪ ಮತ್ತು ರಾಮರವರು ಇದ್ದರು. ಪೊಲೀಸರು ಅಲ್ಲಿ ನನ್ನಿಂದ ಯಾವುದೇ ವಸ್ತು ಅಮಾನತ್ತು ಪಡಿಸಿಕೊಂಡಿರುವುದಿಲ್ಲ.

ನಾನು ಚಿಕಿತ್ಸೆಗೆ ಯಾವ ದಿನಾಂಕ ಹೋಗಿರುತ್ತೇನೆ ಎಂದು ಗೊತ್ತಿಲ್ಲ. ಗಲಾಟೆಯಾದ ಮಾರನೇ ದಿನ ಆಸ್ಪತ್ರೆಗೆ ಹೋಗಿರುತ್ತೇನೆ. ಯಾವುದೇ ಗಲಾಟೆ ನಡೆಯದಿದ್ದರೂ ಸಹಃ ಸುಳ್ಳು ದೂರು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನಗೂ ಮತ್ತು ಆರೋಪಿತರ ನಡುವೆ ಮೊದಲಿನಿಂದಲೂ ದ್ವೇಷವಿದ್ದು ಹಾಗಾಗಿ ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ಪ್ರಕರಣ ದಾಖಲು ಮಾಡಿಸಿರುತ್ತೇನೆ ಎಂದರೆ ಸಾಕ್ಷಿಯು ದ್ವೇಷವೇನೆ ಇರಲಿ ಅವರು ನನಗೆ ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿತರು ನನಗೆ ಬೈದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಕೇಸಿಗೂ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ.

<u>**ಮರು ವಿಚಾರಣೆ ಃ ಇಲ್ಲ**</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಒ,

ಸಹಿ/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು